ತಾಯಿಯಂತಹ ಓದುಗರ ನೆನೆದುಕೊಂಡು ಕತೆಗಳನ್ನು ಬರೆಯುವ ಕನಸನ್ನು ಈಗಲೂ ಕಾಣುತ್ತಿರುತ್ತೇನೆ.

ಕತೆಗಳನ್ನು ಕೇಳುತ್ತಾ ಇರುಳೆಲ್ಲ ಪಕ್ಕದಲ್ಲಿ ಮಲಗಿರುತ್ತಿದ್ದ ಆಕೆ ಕೆಲವು ರಾತ್ರಿ ಹಗಲುಗಳಗಳ ಕಾಲ ಮಾಯವಾಗಿದ್ದಳು. ಹಲವು ದಿನಗಳ ಕಾಲ ಹುಡುಕಿದ ಯಾರಿಗೂ ಅವಳು ಸಿಕ್ಕಿರಲೇ ಇಲ್ಲ. ಅವಳು ಎಲ್ಲಿ ಕಾಣೆಯಾಗಿರಬಹುದು ಎಂದು ಏನು ಕತೆ ಹೇಳುವುದು ಎಂದು ಗೊತ್ತಾಗದೆ ನಾನೂ ಅಸ್ತವ್ಯಸ್ತವಾಗಿದ್ದೆ. ಅವಳ ಪೂರ್ಣ ಚಂದ್ರನಂತಹ ಸ್ನಿಗ್ಧ ಬೆಳಕನ್ನು ಎದುರಿಸಲಾಗದೇ ಆಕಾಶದಿಂದ ಇಳಿದ ಜಿನ್ನುಗಳೆಂಬ ದೇವದೂತರು ಅವಳನ್ನು ಕೆಲವು ಹಗಲು ರಾತ್ರಿಗಳ ಕಾಲ ದೇವಲೋಕದಲ್ಲಿ ಅಡಗಿಸಿಟ್ಟುಕೊಂಡು ಮರಳಿ ಭೂಮಿಗೆ ತಂದುಬಿಟ್ಟರು ಎಂದು ಕತೆಗಾರನಾದ ನನಗೇ ನನ್ನ ತಾಯಿ ರೇಲು ಹತ್ತಿಸಿದ್ದಳು. ಆದರೆ ಭೂಮಿಗೆ ಮರಳಿದ ಆಕೆ ಅಸ್ತವ್ಯಸ್ತವಾಗಿದ್ದಳು. ಆದರೂ ಇರುಳು ನಮ್ಮೆಲ್ಲರ ನಡುವೆ ಮಲಗಲು ಬರುತ್ತಿದ್ದಳು. ಆದರೆ ಯಾವಾಗಲೂ ಕತೆ ಕೇಳುತ್ತಾ ಕಂಪಿಸುತ್ತಿದ್ದ ಆಕೆಯ ಬೆನ್ನು ಯಾಕೋ ನಿಶ್ಚಲವಾದಂತೆ ಅನಿಸಿ ನಾನು ಆಕೆಯನ್ನು ಮುಟ್ಟಲು ಹೋದರೆ ಆಕೆ ಆ ಇರುಳಲ್ಲಿ ನನ್ನ ಕೆನ್ನೆಗೆ ಸದ್ದಾಗದ ಹಾಗೆ ಹೊಡೆದಿದ್ದಳು. ನನಗೆ ಅಳು ಬಂದಿತ್ತು. ಕತೆ ಕೇಳುತ್ತಾ ಕೇಳುತ್ತಾ ನನ್ನ ಕತೆಗಳ ರಾಜಕುಮಾರಿಯೇ ಆಗಿದ್ದವಳು ಕತೆಗಾರನ ಕೆನ್ನೆಗೆ ಹೊಡೆದಿದ್ದಳು. ನನಗೆ ಅಳುವೂ ಬರದಷ್ಟು ಅವಮಾನವಾಗಿತ್ತು. ಆನಂತರ ಪುಟ್ಟವಳಾಗಿದ್ದ ಆಕೆಯನ್ನು ಒಬ್ಬ ನಡುವಯಸ್ಸಿನ ಮುಲ್ಲಾನೊಬ್ಬನಿಗೆ ಕೊಟ್ಟು ಮದುವೆ ಮಾಡಿಸಿದ್ದರು. ಮದುವೆಯಾದ ನಂತರ ಆಕೆ ಗಂಡನೊಡನೆ ನಮ್ಮ ಮನೆಗೆ ಔತಣಕ್ಕೆ ಬಂದಿದ್ದಳು. ಆಗ ನನಗೆ ಅಳು ಬಂದಿತ್ತು. ಕತೆ ಹೇಳುತ್ತಾ ಏಳು ಆಕಾಶಗಳ ಮೇಲೆ ಹಾರಾಡುತ್ತಿದ್ದ ನಾನು ಆಗ ಏಳನೆಯ ಪಾತಾಳವನ್ನೂ ಅನುಭವಿಸಿದ್ದೆ. ಇನ್ನೂ ಮೀಸೆ ಮೂಡದ ಎಳೆಯ ಬಾಲಕನೊಬ್ಬನ ದಾವಾಗ್ನಿಯಂತಹ ವಿರಹ ಮತ್ತು ಆಕ್ರೋಶ (ಈಗ ನನಗೆ ವಯಸ್ಸು ಐವತ್ತು ದಾಟಿದೆ. ಆದರೂ ತಮಾಷೆಯೆಂದರೆ ಆ ಹೊತ್ತಿನ ಅವಮಾನದ ಆ ದಾವಾಗ್ನಿ ಇನ್ನೂ ಹಾಗೇ ಇದೆ!) ಎಂಟನೇ ತರಗತಿಯಲ್ಲಿದ್ದಾಗ ಆದ ಈ ಅವಮಾನವನ್ನು ನೆನೆದುಕೊಂಡು ಹತ್ತನೇ ತರಗತಿಯಲ್ಲಿರುವಾಗ ಒಂದು ಕತೆ ಬರೆದಿದ್ದೆ. ಬಹುಶಃ ಅದು ನನ್ನ ಮೊದಲ ಕತೆ. ದೇವರೇ ಎಷ್ಟೊಂದು ಆಕ್ರೋಶ ಮತ್ತು ಕ್ರೋಧ ಮತ್ತು ದುಃಖ ಆ ಕತೆಯೊಳಗಿತ್ತು. ಕತೆಯ ಹೆಸರು ಹೇಳಲೂ ಈಗ ನನಗೆ ಸಂಕೋಚವಾಗುತ್ತದೆ.

ಆದರೆ ಆಕೆ ಆಮೇಲೆ ಕೆಲವು ವರ್ಷಗಳಲ್ಲಿ ತೀರಿಹೋದಳು. ತೀರಿಹೋಗುವ ಮೊದಲು ನನ್ನನ್ನು ನೋಡಬೇಕು ಎಂದು ಹೇಳುತ್ತಿದ್ದಳಂತೆ. ಆದರೆ ಆಗ ನಾನು ದೊಡ್ಡವರಿಗೆ ಕತೆ ಹೇಳುತ್ತಾ, ನನ್ನ ಬಾಲ್ಯದ ಸರಕುಗಳನ್ನು ಅಕ್ಷರಗಳಿಗೆ ವಿನಿಮಯ ಮಾಡುತ್ತಾ, ಕ್ರಾಂತಿಕಾರಿಯಂತೆ ಭಾಷಣ ಮಾಡುತ್ತಾ, ಹಾಡು ಹೇಳುತ್ತಾ ಆ ರೋಮಾಂಚನದಲ್ಲಿ ಅವಳನ್ನು ಮರೆತಿದ್ದೆ. ಇತ್ತೀಚೆಗೆ ಅವಳು ಕನಸಲ್ಲಿ ಬಂದಿದ್ದಳು. 'ನಾನು ಯಾರು ನೆನಪಿದೆಯಾ?' ಎಂದು ಕೇಳಿದ್ದಳು. 'ನೀನು ಬಹಳ ದೊಡ್ಡ ಮನುಷ್ಯನಾಗಿದ್ದೀಯಾ ಆದರೆ ನಿನ್ನ ತಲೆ ನದಿಯ ಕಲ್ಲಿನ ಹಾಗೆ ನುಣುಪಾಗಿದೆಯಲ್ಲಾ' ಎಂದು ತಮಾಷೆ ಮಾಡಿದ್ದಳು. ನನಗೆ ಅಚ್ಚರಿಯಾಗುವ ಹಾಗೆ ಆಕೆ ತೀರಿಹೋಗಿದ್ದರೂ ಪೂರ್ಣಚಂದ್ರನಂತೆ ಬೆಳಗುತ್ತಿದ್ದಳು. ಆಕೆ ಬದುಕಿದ್ದಾಗ ತನ್ನ ತಲೆಯ ವಸ್ತ್ರವನ್ನು ಬಿಚ್ಚಿ ಆಕಾಶಕ್ಕೆ ತೋರಿಸಿ ನನಗೆ ಚಂದ್ರನನ್ನು ಎಣಿಸಲು ಹೇಳುತ್ತಿದ್ದಳು. ಒಂದನೆಯ ಚಂದ್ರ, ಹತ್ತನೆಯ ಚಂದ್ರ, ಹದಿನಾಲ್ಕನೆಯ ಚಂದ್ರ. ಆಯಾ ಇರುಳಂದು ಅವಳ ಕನ್ನಡಿ ಕನ್ನಡಿಯ ತಲೆವಸ್ತ್ರದಲ್ಲಿ ಕಾಣಿಸುತ್ತಿದ್ದ ಅಷ್ಟಷ್ಟೇ ಚಂದ್ರಗಳು. ತೀರಿಹೋದ ಮೇಲೆ ಎಷ್ಟೋ ದಶಕಗಳ ನಂತರ ಕನಸಲ್ಲಿ ಬಂದಿದ್ದ ಅವಳಿಗೆ ವಯಸ್ಸೇ ಆಗಿರಲಿಲ್ಲ. ಅವಳಿಗೆ ನಾನು ಹೇಳುತ್ತಿದ್ದ ಕತೆಗಳು ಇನ್ನೂ ನೆನಪಿರಬಹುದು. ಆದರೆ ಕತೆ ಹೇಳುತ್ತಿದ್ದ